ಓ.ಎಸ್.ನಂ.208/2021

ಡಿ .ಡಬ್ಲ್ಯೂ- 1

<u>ದಿನಾಂಕ: **11-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲು:** ವಾದಿ ಪರ ಶ್ರೀ ಕೆ ಎಸ್ ಹೆಚ್ **ವಕೀಲರಿಂದ**</u>

ನನ್ನ ತಂದೆ ಹೆಸರು ರಾಣೋಜಿರಾವ್ ಬಸೋಜಿ ಎಂದರೆ ಸರಿ. ದಾವ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವ ಸ್ವತ್ತು ಸೊಂಪುರದಲ್ಲಿ ಸರ್ವೆ ನಂ.26 ರಲ್ಲಿ 1 ಎಕರೆ 7 ಗುಂಟೆ ಎಂದರೆ ಸರಿ. ನನ್ನ ಜಮೀನಿನ ಸರ್ವೆ ನಂ.18. ನಿಮ್ಮ ಜಮೀನು ವಾದಿಯರ ಜಮೀನಿನ ಕೆಳಭಾಗದಲ್ಲಿರುತ್ತದೆ ಎಂದರೆ ಸಾಕ್ಷಿ ನಮ್ಮ ಜಮೀನಿಗೂ ಅವರ ಜಮೀನಿಗೂ ಸಂಬಂಧ ಇರುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿಯರ ಜಮೀನಿನ ಪೂರ್ವ ಭಾಗಕ್ಕೆ ನಿಮ್ಮ ಜಮೀನು ಬರುತ್ತದೆ ಎಂದರೆ ಸಾಕ್ಷಿ ಕೃಷ್ಣಪ್ಪನವರ ಜಮೀನು ಬರುತ್ತದೆ, ಪಶ್ಚಿಮ ಭಾಗಕ್ಕೆ ಭಾಗ್ಯಮ್ಮನವರ ಜಮೀನು ಬರುತ್ತದೆ ಎಂದರೆ ಸರಿ. ಉತ್ತರ ಭಾಗದ ಕಡೆ ಕೆಂಚಪ್ಪ ಬಿನ್ ರಂಗೇಗೌಡರ ಜಮೀನು ಬರುತ್ತದೆ ಎಂದರೆ ಸರಿ. ದಕ್ಷಿಣ ಭಾಗಕ್ಕೆ ಸುಲೋಚನಮ್ಮನವರ ಜಮೀನು ಬರುತ್ತದೆ ಎಂದರೆ ಸಾಕ್ಷಿ ರುದ್ರನಾಯ್ಕ, ಗಿರಿಜ ಬಾಯಿರವರ ಜಮೀನು ಬರುತ್ತದೆ ಎಂದು ನುಡಿದಿರುತ್ತಾರೆ.

ದಾವ ಸ್ವತ್ತಿನಲ್ಲಿ ವಾದಿ 20 ವರ್ಷಗಳಿಂದ ಸ್ವಾದೀನದಲ್ಲಿರುತ್ತಾರೆಂದರೆ ಸಾಕ್ಷಿ ಅವರ ಸ್ವತ್ತಿನಲ್ಲಿ ಅವರು ಸ್ವಾಧೀನದಲ್ಲಿರುತ್ತಾರೆಂದು ನುಡಿದಿರುತ್ತಾರೆ. ವಾದಿಗಳು ಅಡಿಕೆ ಮತ್ತು ತೆಂಗಿನ ತೋಟಗಳನ್ನು ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ಅವರ ಸ್ವತ್ತಿನಲ್ಲಿ ಮಾಡಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ವಾದಿಯ ಗಂಡ ತೀರಿಕೊಂಡಿರುತ್ತಾರೆಂದರೆ ಸರಿ. ಅವರಿಗೆ 1 ಹೆಣ್ಣು ಮತ್ತು 1 ಗಂಡು ಮಗ ಇರುತ್ತಾರೆಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಅವರ ಮಕ್ಕಳು ವಾದಿಯ ಜೊತೆ ಈಗ ವಾಸ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಾದಿಯು ಒಬ್ಬರೇ ಇರುವುದರಿಂದ ಅವರ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಅವರ ಜಮೀನನ್ನು ಒತ್ತುವರಿ

ಮಾಡಿರುತ್ತಿರಾ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ನಾವು ಕೆಂಚಪ್ಪ ಬಿನ್ ರಂಗೇಗೌಡರವರ ಜಮೀನು ಹೊಡೆಯುತ್ತಿದ್ದು ಅದಕ್ಕೆ ವಾದಿ ತಕರಾರು ಮಾಡುತ್ತಿದ್ದಾರೆಂದು ನುಡಿದಿರುತ್ತಾರೆ. ವಾದಿಯು ನಿಮ್ಮ ವಿರುದ್ದ ಅವರಿಗೆ ತೊಂದರೆ ಮಾಡುತ್ತಿದ್ದಿರಾ ಎಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆಂದರೆ ಸಾಕ್ಷಿ ಅವರೇ ನಮಗೆ ತೊಂದರೆ ನೀಡುತ್ತಿದ್ದಾರೆಂದು ನುಡಿದಿರುತ್ತಾರೆ. ನ್ಯಾಯಾಲಯದಿಂದ ಟೆಂಪರರಿ ಇನ್‌ಜಕ್ಷನ್ ನೀಡಿದ ನಂತರ ನೀವು ವಾದಿಗೆ ತೊಂದರೆ ಕೊಡುವುದು ನಿಲ್ಲಿಸಿರುತ್ತಿರಾ ಎಂದರೆ ಸಾಕ್ಷಿ ನಾವು ತೊಂದರೆ ಕೊಡುತ್ತಿರಲಿಲ್ಲ ವಾದಿಯೇ ತೊಂದರೆ ಕೊಡುತ್ತಿದ್ದಾರೆಂದು ನುಡಿದಿರುತ್ತಾರೆ. ನಮಗೆ ನಮ್ಮ ಸ್ವತ್ತು ಪಿತ್ರಾರ್ಜಿತವಾಗಿ ಬಂದಿರುತ್ತದೆ. ನೀವು ವಾದಿಯ ಜಮೀನಿನ ಪೂರ್ವ ದಿಕ್ಕಿನಲ್ಲಿ ಜಮೀನು ಹೊಡೆಯುತ್ತಿದ್ದು, ವಾದಿಯ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಚಕ್ಕುಬಂದಿಯನ್ನು ತಿಳಿಸಿರುತ್ತಿರಾ ಎಂದರೆ ಸರಿಯಲ್ಲ. ನೀವು ಹೇಳುವ ಚಕ್ಕುಬಂದಿಯನ್ನು ಸೂಚಿಸುವಂತೆ ಯಾವುದೇ ದಾಖಲಾತಿಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನೀವು ವಾದಿಯ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳ ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸಾಕ್ಷಿ ವಾದಿಯು ಕೆಂಚಪ್ಪನವರ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತಾರೆಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**